## ಶಕುನಗಳ ಸ್ವಾರಸ್ಯಕರ ಕಥೆ

‘ಚಂದನ’ ವಾಹಿನಿಯಲ್ಲಿ ಹಾಸ್ಯ ಸಾಹಿತಿ ಎಂ.ಎಸ್. ನರಸಿಂಹಮೂರ್ತಿ ನೇತೃತ್ವದಲ್ಲಿ ಮೂಡಿಬಂದ ಹರಟೆ ಕಾರ್ಯಕ್ರಮ ಅರ್ಥಪೂರ್ಣವಾಗಿತ್ತು. ಶಕುನಿಗಳಿಗೆ ಮೂಲ ಮಹಾಭಾರತದ ಶಕುನಿ ಕಾರಣ ಎಂಬ ಅಂಶವನ್ನು ಗುಂಡೂರಾವ್ ಹಾಸ್ಯಮಿಶ್ರಿತ ಶೈಲಿಯಲ್ಲಿ ನಿರೂಪಿಸಿ ಕಾರ್ಯಕ್ರಮಕ್ಕೆ ಕಳೆ ತುಂಬಿದರು. ಅದಕ್ಕೆ ಸಹವರ್ತಿಗಳು ತಮ್ಮ ವಾದವನ್ನು ಮಂಡಿಸಿದರು. ಮನೆ ಬಿಡಿಸಲು ಗೂಬೆ ಹಾರಿಸಿದ ಸನ್ನಿವೇಶ ಶಕುನಕ್ಕೆ ಹೇಗೆ ಪೂರಕವಾಗಿದೆ ಎಂದು ನೀಡಿದ ವಿವರ ಸ್ವಾರಸ್ಯಕರವಾಗಿತ್ತು.

—ಕುಬೇರಪ್ಪ ಎಂ. ವಿಭೂತಿ, ಹರಿಹರ



## ಭೋಜರಾಜನ ಮುಷ್ಕರ ಸರಿಯೆ?

ಝೀ ಕನ್ನಡದ ‘ಸತ್ಯ’ ಧಾರಾವಾಹಿಯಲ್ಲಿ ಸತ್ಯಳಿಂದ ಮಗುವನ್ನು ಅಪೇಕ್ಷಿಸಿ ಕುಟುಂಬದವರು ಮುಷ್ಕರ ಹೂಡಿದ್ದು ಹಾಸ್ಯಾಸ್ಪದವಾಗಿತ್ತು. ಜೀವನ ನಿರ್ವಹಣೆಯ ಈ ಕಷ್ಟ ಕಾಲದಲ್ಲಿ ಕಲಾವಿದರಿಂದ ಎಂತಹ ಪಾತ್ರಗಳನ್ನು ನಿರೂಪಿಸುತ್ತಿದ್ದಾರೆ ಎನ್ನುವುದಕ್ಕೆ ಈ ದೃಶ್ಯ ಸಾಕ್ಷಿಯಂತಿತ್ತು. ಒಂದುಕಾಲದಲ್ಲಿ ಕವಿರತ್ನ ಕಾಳಿದಾಸನ ಮಿತ್ರ ಭೋಜರಾಜ ಮಹಾಪ್ರಭುವಾಗಿ ಮೆರೆದಿದ್ದ ಶ್ರೀನಿವಾಸಮೂರ್ತಿ ಅವರು ಪ್ಲಕಾರ್ಡ್ ಹಿಡಿದಿದ್ದು ನೋಡಿ ಬೇಸರವಾಯಿತು.

—ವಾ. ಮುರಳೀಧರ, ತೀರ್ಥಹಳ್ಳಿ

ವಾರದ ಪತ್ರ

## ಮಳೆದಿನಗಳಲ್ಲಿ ನಗುವಿನ ಆರ್ಭಟ

ಈ ದಿನಗಳಲ್ಲಿ ಆರ್ಭಟಿಸುತ್ತಿರುವ ವರುಣದೇವ ವಾತಾವರಣವನ್ನು ತಂಪಾಗಿಸಿದ್ದಾನೆ. ಆಕಾಶಕ್ಕೆ ಜರಡಿ ಹಿಡಿದಂತೆ ಸುರಿಯುವ ಸೋನೆ ಮಳೆಯಲ್ಲಿ ಹೊರ ಹೋಗಲು ಆಗದೆ, ವಾರಾಂತ್ಯದಲ್ಲಿ ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುವ ಹಾಸ್ಯದ ರಸದೌತಣ ಸವಿದೆ. ಅದರಲ್ಲಿ ‘ಮಜಾಭಾರತ’ ನಗುವಿನ ಆರ್ಭಟ ಕಂಡು ಖುಷಿ ಆಯಿತು. ಪಾವಗಡ ಮಂಜು, ಚಿಲ್ಲರ್ ಮಂಜು, ರಾಘವೇಂದ್ರ (ರಾಗಿಣಿ ಹೆಣ್ಣಿನ ಪಾತ್ರ), ಕಾರ್ತಿಕ್ ಮುಂತಾದವರ ಹಾಸ್ಯ ಸನ್ನಿವೇಶ ವೀಕ್ಷಿಸುತ್ತಾ ವೀಕ್ ಎಂಡ್ ಎಂಜಾಯ್ ಮಾಡುತ್ತಿದ್ದಾಗ ಮಂಜು ಪಾವಗಡ ಮದುವೆ ಆಗಿ ಹದಿನೈದು ದಿನಗಳಲ್ಲಿ ತನ್ನ ಪತ್ನಿಗಾಗಿ ‘ರಾಗಿಣಿ ಮಹಲ್’ ನಿರ್ಮಿಸಿದ್ದು, ಸ್ನೇಹಿತರು ಯದ್ವಾತದ್ವಾ ಹೊಡೆದ ಸನ್ನಿವೇಶ ಚೆನ್ನಾಗಿತ್ತು. ನಿರೂಪಕಿ ಅನುಪಮಾ ಗೌಡ ಹಾಗೂ ತೀರ್ಪುಗಾರರು ತಮ್ಮ ಆಸನದಿಂದ ಎದ್ದು ಬಿದ್ದು ನಗುತ್ತಿದ್ದ ಬಗೆ ಅಚ್ಚರಿಯನ್ನು ಮೂಡಿಸಿತು.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಪ್ರಾಯೋಜಕರೂ ಯೋಚಿಸಬೇಕು

ಇತ್ತೀಚೆಗೆ ಟೀವಿಯ ಬಹುತೇಕ ಧಾರಾವಾಹಿಗಳಲ್ಲಿ ನಿರ್ದೇಶಕರು ಅನಗತ್ಯವಾದ ಪ್ರಸಂಗಗಳನ್ನು ತುರುಕಿ ಅಸಹನೀಯವಾಗಿಸುತ್ತಿದ್ದಾರೆ. ಝೀ ಕನ್ನಡದ ‘ಪುಟ್ಟಕ್ಕನ ಮಕ್ಕಳು’ನಲ್ಲಿ ರಾಧಾ, ನಂಜಮ್ಮ (ಮಗುವಿಗೆ ವಿಷ ಹಾಕುವುದು), ‘ಸತ್ಯ’ದಲ್ಲಿ ಕೀರ್ತನ, ‘ಕೆಂಡ ಸಂಪಿಗೆ’ಯ ಸಾಧನ, ‘ಭಾಗ್ಯಲಕ್ಷ್ಮಿ’ಯ ಶ್ರೇಷ್ಠ, ‘ಶ್ರೀ ರಸ್ತು’ವಿನ ದೀಪಿಕಾ ಮನೆ ಹಾಳು ಮಾಡುತ್ತಿದ್ದಾರೆ. ಸಮಾಜಕ್ಕೆ ಕೆಟ್ಟ ಸಂದೇಶವನ್ನು ನೀಡುತ್ತಿರುವ ಈ ಧಾರಾವಾಹಿಗಳ ನಿರ್ಮಾಪಕರು ಮತ್ತು ಅವುಗಳ ಪ್ರಾಯೋಜಕರು ಈ ಬಗ್ಗೆ ಚಿಂತಿಸಬೇಕಿದೆ. ಸಮಾಜಕ್ಕೆ ಕೆಟ್ಟ ಸಂದೇಶವನ್ನು ನೀಡುತ್ತಿರುವ ಇಂತಹ ಧಾರಾವಾಹಿಗಳನ್ನು ಈ ಕೂಡಲೇ ನಿಲ್ಲಿಸಿ.

—ಬೀ. ನಾಗರಾಜು, ಬೆಂಗಳೂರು

## ಅನನ್ಯ ಸಿರಿ ಕನ್ನಡ ಕಂಠ

ನಿರೂಪಕಿ ಅಪರ್ಣಾ ಅವರು ನಡೆಸಿಕೊಡುತ್ತಿದ್ದ ‘ಸಿಂಪಲ್ ಆಗಿ ಒಂದು ಸಿನಿಮಾ ಕಥೆ’ ಈಚೆಗೆ ಸಿರಿ ಕನ್ನಡದಲ್ಲಿ ಮರು ಪ್ರಸಾರವಾಯಿತು. 60–70ರ ದಶಕದ ಸಿನಿಮಾಗಳ ಮರೆಯಲಾಗದ ದೃಶ್ಯ, ಅಂದಿನ ಸುಮಧುರ ಗೀತೆ, ಅಭಿನಯ ದಿಗ್ಗಜರ ದರ್ಶನ ಮಾಡಿದಂತೆ ಆಯಿತು. ರಾಜ್‌ಕುಮಾರ್, ಪಂತುಲು, ನರಸಿಂಹರಾಜು, ಮಂಜುಳಾ, ಕಲ್ಪನಾ, ಎಂ.ವಿ. ರಾಜಮ್ಮ ಮೊದಲಾದ ನಟರ ಹಳೆಯ ಚಿತ್ರದ ತುಣುಕುಗಳು ನೋಡಲು ಹಿತವೆನಿಸಿತು. ಅಪರ್ಣಾ ಅವರ ಧ್ವನಿ ಕೇಳುವುದೇ ಅತಿ ಮಧುರ.

—ಭಾರತೀ ಗಂಗಾಧರ್, ಬೆಂಗಳೂರು

## ದೊಡ್ಡವರೆಲ್ಲ ಜಾಣರಲ್ಲ...




ಭಾರತ–ಜಿಂಬಾಬ್ವೆ ಚುಟುಕು ಕ್ರಿಕೆಟ್ ಪಂದ್ಯವನ್ನು ಟೀವಿಯಲ್ಲಿ ವೀಕ್ಷಿಸುತ್ತಿದ್ದೆ. ಪ್ರಸಾರದ ವೇಳೆ ಪ್ರೇಕ್ಷಕರ ಅಪರೂಪದ ಕ್ಷಣಗಳನ್ನು ಪ್ರಸಾರ ಮಾಡುವುದನ್ನು ಸಾಮಾನ್ಯವಾಗಿ ನೋಡಿದ್ದೇವೆ. ಈ ಪಂದ್ಯದಲ್ಲಿ ಬಾಲಕನ ಚಿತ್ರವೂ ಪ್ರಸಾರ ಆಗಿತು. ಆಗ ದೊಡ್ಡವರು ಅಡ್ಡ ಬಂದು ಬಾಲಕನ ಖುಷಿಗೆ ಅಡ್ಡಿಪಡಿಸಿದರು. ಆ ಹುಡುಗ ಮರಳಿ ಹೆಬ್ಬೆರಳು ತೋರಿದ. ಅದು ಉತ್ತಮ ಪ್ರತಿಕ್ರಿಯೆಯಾಗಿತ್ತು. ಆತ ಯಾವುದೇ ಬೊಬ್ಬೆ ಹಾಕದೆ ಸಂತಸಪಟ್ಟಿದ್ದು ಆತನ ಮೊಗದಲ್ಲಿ ಕಾಣುತ್ತಿತ್ತು. ದೊಡ್ಡವರು ಭಿತ್ತಿ ಚಿತ್ರ ಹಿಡಿದು ಬೊಬ್ಬೆ ಹಾಕುತ್ತಿದ್ದರು!

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಕೊನೆಯಿಲ್ಲದ ಮಾಲ್ಗುಡಿ ಆಕರ್ಷಣೆ

ಸಂಜೆ ಆದಂತೆ ಕೈಯಲ್ಲಿ ರಿಮೋಟ್ ಹಿಡಿದು ಟೀವಿಯಲ್ಲಿ ಬರುವ ಧಾರಾವಾಹಿಗಳನ್ನು ನೋಡ್ತಾ, ‘ಈ ಸೀರಿಯಲ್ ಚಂದವಿಲ್ಲ, ಆ ಸೀರಿಯಲ್ ಛಲೋ ಐತಿ’ ಎಂದು ಚಾನಲ್ ಬದಲಾಯಿಸ್ತಾ ಇರುವ ಇಂದಿನ ಗೃಹಿಣಿಯರು, ಟೀವಿ ನೋಡಿ ಬೇಸರದಿಂದ ಮೊಬೈಲ್ ಹಿಡಿದು ಬೆರಳಾಡಿಸಿದಂತೆ ಅನನ್ಯ ಜಗತ್ತೊಂದು ತೆರೆದುಕೊಂಡಿತು. ಎಲ್ಲಿಲ್ಲದ ಖುಷಿ ಆಯ್ತು. ಕಾರಣ, ಅದೆಷ್ಟು ಬಾರಿ ನೋಡಿದ್ರೂ ಮತ್ತೊಮ್ಮೆ ನೋಡಬೇಕು, ಮೊಮ್ಮಕ್ಕಳೊಂದಿಗೆ ನೋಡಬೇಕೆಂಬ ಆಸೆ ಮೂಡಿಸುವಂತಹ, ದಿನಕ್ಕೊಂದು ಸಣ್ಣ ಕಥೆಗಳ ಮೆಚ್ಚಿನ ಧಾರಾವಾಹಿ. ಅದುವೇ ಈ ಹಿಂದೆ ನೋಡಿದ ‘ಮಾಲ್ಗುಡಿ ಡೇಸ್’. ಆರ್.ಕೆ. ನಾರಾಯಣ್ ಅವರ ಸಣ್ಣ ಕಥೆಗಳಿಗೆ ಶಂಕರನಾಗ್ ನಿರ್ದೇಶನದಲ್ಲಿ ಆ ಧಾರಾವಾಹಿ ಮೂಡಿಬಂದಿತ್ತು. ಕೆಲವು ಬಾರಿ ನೋಡಿದ್ದಾದರೂ ನೋಡುವಂತಾಯಿತು.

—ಅನುರಾಧ ಟಿ., ದಾವಣಗೆರೆ

## ಹೆಂಡತಿಗೆ ನಮೋ ನಮೋ...

ಚಂದನ ವಾಹಿನಿಯಲ್ಲಿ ಪ್ರಸಾರವಾದ ‘ಹೆಂಡತಿಗೆ ನಮೋ ನಮೋ’ ನಾಟಕ ಈ ಮಳೆ ಚಳಿಯ ವಾತಾವರಣದಲ್ಲಿ ಬಿಸಿ ಬಿಸಿ ಪಕೋಡ, ಅವಲಕ್ಕಿಯ ಚೂಡಾ ತಿಂದ ಹಾಗೆ ಇತ್ತು. ಕಲಾವಿದರ ಅಭಿನಯ, ವಚನ ಗಾಯನ ತುಂಬ ಚೆನ್ನಾಗಿ ಮೂಡಿಬಂತು. ಉತ್ತರಕರ್ನಾಟಕದ ಸಂಭಾಷಣೆಯ ಮಧ್ಯದಲ್ಲಿ ಕಲಾವಿದರ ವಚನ ಗಾಯನ ಮಧುರವಾಗಿತ್ತು.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು